**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಶಾಲಾ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-01**

ಸಂಖ್ಯೆ: E-**29933/**DSERT/EVG/1-10ಮೌಲ್ಯಾಂಕನ/2026-27 ದಿನಾಂಕ: 16-06-2026

# ಮೌಲ್ಯಾಂಕನ ಸುತ್ತೋಲೆ

ವಿಷಯ: 2026-27 ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯ ಪಠ್ಯಕ್ರಮದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ 1 ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಮೌಲ್ಯಾಂಕನ ನಡೆಸುವ ಬಗ್ಗೆ.

ಉಲ್ಲೇಖ:1. ಆಯುಕ್ತರ ಕಛೇರಿ ಜ್ಞಾಪನ ಸಂಖ್ಯೆ: ಸಿ4 (9)ವಾ.ಕ್ರಿ.ಯೋ/ಅನುಷ್ಠಾನ/01/ 2025-26/2035272 ದಿನಾಂಕ: 09-04-2026

2. ಈ ಕಛೇರಿಯ ಸುತ್ತೋಲೆ ಸಂಖ್ಯೆ: E-12745 DSERT/EVG/ ಸೇ.ಬಂ.ಕಾ/2026-27 ದಿನಾಂಕ: 19-05-2026

3. ಶೈಕ್ಷಣಿಕ ಮಾರ್ಗದರ್ಶಿ 2026-27

***

ರಾಜ್ಯ ಪಠ್ಯಕ್ರಮವನ್ನು ಅನುಸರಿಸುತ್ತಿರುವ 1 ರಿಂದ 10ನೇ ತರಗತಿ ಶಾಲೆಗಳಿಗೆ 2026-27ನೇ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ವಾರ್ಷಿಕ ಕ್ರಿಯಾಯೋಜನೆಯನ್ನು ಉಲ್ಲೇಖ-1 ರನ್ವಯ ಹೊರಡಿಸಲಾಗಿದೆ. ಇದನ್ನು ಆಧರಿಸಿ ಶಾಲೆಗಳಲ್ಲಿ ಕಲಿಕಾ ಪ್ರಕ್ರಿಯೆ ಹಾಗೂ ಮೌಲ್ಯಾಂಕನ ಪ್ರಕ್ರಿಯೆ ಕುರಿತು ಈ ಕೆಳಕಂಡಂತೆ ಕ್ರಮವಹಿಸಲು ತಿಳಿಸಿದೆ.

1. 2026-27ನೇ ಸಾಲಿನ ಶೈಕ್ಷಣಿಕ ವರ್ಷವು ದಿನಾಂಕ: 29-05-2026 ರಿಂದ ಪ್ರಾರಂಭವಾಗಿದ್ದು, ಪ್ರಸ್ತುತ ಸಾಲಿನ ಶೈಕ್ಷಣಿಕ ಚಟುವಟಿಕೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸುತ್ತೋಲೆಗಳನ್ನು ನೀಡಲಾಗುತ್ತಿದೆ.
2. ವಿದ್ಯಾರ್ಥಿಗಳ ಕಲಿಕೆಯನ್ನು ಸಮರ್ಪಕವಾಗಿ ಅನುಕೂಲಿಸುವ ಸಲುವಾಗಿ '**ಕಲಿಕಾ ಚೇತರಿಕೆ**', '**ಕಲಿಕಾ ಬಲವರ್ಧನೆ**', '**ಕಲಿಕಾ ಫಲಾಧಾರಿತ ಪ್ರಶ್ನೆಕೋಠಿ**' ಉಪಕ್ರಮಗಳಡಿ ಸಿದ್ಧಪಡಿಸಲಾಗಿರುವ ಕಲಿವಿನ ಫಲಾಧಾರಿತ ವಿದ್ಯಾರ್ಥಿಗಳ ಚಟುವಟಿಕೆ ಪುಸ್ತಕಗಳು ಹಾಗೂ ಶಿಕ್ಷಕರ ಕೈಪಿಡಿಗಳು DSERT Website ನಲ್ಲಿ ಈಗಾಗಲೇ ಲಭ್ಯವಿರುತ್ತದೆ. ಇವುಗಳನ್ನು ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ಅಳವಡಿಸಿ ವಿದ್ಯಾರ್ಥಿಗಳ ಕಲಿಕಾ ಅಂತರವನ್ನು ಬೆಸೆಯಲು ಕ್ರಮವಹಿಸುವುದು.
3. ವಿದ್ಯಾರ್ಥಿಗಳನ್ನು ತರಗತಿ ನಿರ್ದಿಷ್ಟ ಕಲಿಕೆಗೆ ಸಜ್ಜುಗೊಳಿಸಲು ಶೈಕ್ಷಣಿಕ ವರ್ಷದ ಆರಂಭದಲ್ಲಿ '**ಸೇತುಬಂಧ**' ಉಪಕ್ರಮವನ್ನು ಉಲ್ಲೇಖ-2 ರಂತೆ ಜೂನ್ ತಿಂಗಳಿನಲ್ಲಿ ನಡೆಸಲಾಗಿರುತ್ತದೆ. ಸೇತುಬಂಧದ ಹಾಗೂ FLN ಸಂಬಂಧಿತ ಕಲಿಕಾ ಫಲಗಳನ್ನು ನಿಡಲಾಗಿದ್ದು ಅದರಂತೆ ಬಿ ಕಲಿಕಾ ಹಂತದ ವಿದ್ಯಾರ್ಥಿಗಳು ಅಪೇಕ್ಷಿತ ಕಲಿಕಾ ಹಂತವನ್ನು ತಲುಪಲು ಅಗತ್ಯವಿರುವ ಕಲಿಕಾ ತಂತ್ರಗಳನ್ನು ಬಳಸಿ ವಿದ್ಯಾರ್ಥಿಗಳ ಕಲಿಕೆಯನ್ನು ಅನುಕೂಲಿಸುವುದು.
4. 2026-27ನೇ ಸಾಲಿಗೆ ರಾಜ್ಯದ ಎಲ್ಲಾ ಕೆ.ಪಿ.ಎಸ್ ಶಾಲೆಗಳು, ಪಿಎಂಶ್ರೀ ಶಾಲೆಗಳು ಮತ್ತು ಎಲ್ಲಾ ದ್ವಿಭಾಷಾ ತರಗತಿಗಳನ್ನು ಪ್ರಾರಂಭಿಸಿರುವ ಸರ್ಕಾರಿ ಶಾಲೆಗಳು, ಎಲ್ಲಾ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಿರುವ ಸರ್ಕಾರಿ ಶಾಲೆಗಳು, ಗಣಿಬಾಧಿತ ತಾಲ್ಲೂಕುಗಳಾದ ಚಿತ್ರದುರ್ಗ, ಹೊಳಲ್ಕೆರೆ ಮೊಣಕಾಲ್ಮೂರು, ಹೊಸದುರ್ಗ ಚಿಕ್ಕನಾಯಕನಹಳ್ಳಿ, ಗುಬ್ಬಿ, ತಿಪಟೂರು, ಬಳ್ಳಾರಿ, ಸಂಡೂರು ಮತ್ತು ಹೊಸಪೇಟೆ ತಾಲ್ಲೂಕುಗಳಲ್ಲಿನ ಎಲ್ಲಾ ಸರ್ಕಾರಿ ಶಾಲೆಗಳು ಮತ್ತು 15 ಜಿಲ್ಲೆಗಳಾದ

Scanned with OKEN Scanner

ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ, ರಾಮನಗರ, ಹಾವೇರಿ, ಕಲಬುರಗಿ, ಶಿವಮೊಗ್ಗ, ಹಾಸನ ತುಮಕೂರು, ದಕ್ಷಿಣಕನ್ನಡ, ಕೋಲಾರ, ಧಾರವಾಡ, ಬಾಗಲಕೋಟೆ, ವಿಜಯಪುರ, ಕೊಪ್ಪಳ ಜಿಲ್ಲೆಗಳ ಎಲ್ಲಾ ಸರ್ಕಾರಿ ಶಾಲೆಗಳಲ್ಲಿ 01 ರಿಂದ 05ನೇ ತರಗತಿಗಳಿಗೆ ಏಕತರಗತಿ ದ್ವಿಭಾಷಾ ತರಗತಿಗಳನ್ನು ಪ್ರಾರಂಭಿಸಲು ಆದೇಶಿಸಲಾಗಿದೆ. ಆದೇಶದನ್ವಯ ಶಿಕ್ಷಕರಿಗೆ ದ್ವಿಭಾಷಾ ಮಾಧ್ಯಮ ತರಗತಿ ಪ್ರಕ್ರಿಯೆಗೆ ಸಜ್ಜುಗೊಳಿಸಲು ತರಬೇತಿಗಳನ್ನು ನೀಡಲಾಗಿರುತ್ತದೆ. ಅದರಂತೆ ತರಗತಿ ಪ್ರಕ್ರಿಯೆಗಳನ್ನು ಅನುಕೂಲಿಸಲು ಕ್ರಮವಹಿಸುವುದು.

5. 2025-26ನೇ ಸಾಲಿನಿಂದ ರಾಜ್ಯ ಪಠ್ಯಕ್ರಮದ ಶಾಲೆಗಳ ತರಗತಿಗಳಲ್ಲಿ ನಿರಂತರ ಮೌಲ್ಯಾಂಕನ ಪ್ರಕ್ರಿಯೆಗೆ ಅನುಕೂಲವಾಗುವಂತೆ ಪಾಠ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿಯನ್ನು ಸಿದ್ಧಪಡಿಸಿ DSERT Website ನಲ್ಲಿ ಅಳವಡಿಸಿ ಅನುಷ್ಠಾನ ಸಂಬಂಧ ಮಾರ್ಗದರ್ಶನ ನೀಡಲಾಗಿದೆ.
6. ಪ್ರತಿ ಪಾಠದ ನಂತರ ವಿದ್ಯಾರ್ಥಿಯ ಕಲಿಕೆಯನ್ನು ದೃಢೀಕರಿಸಿಕೊಳ್ಳಲು ಪಾಠ ಆಧಾರಿತ ಮೌಲ್ಯಾಂಕನದ ಪ್ರಶ್ನೆಕೋಠಿಯಲ್ಲಿನ ಪ್ರಶ್ನೆಗಳನ್ನು ಆಧರಿಸಿ ಮೌಲ್ಯಾಂಕನ ಮಾಡುವುದು.
7. 2026-27ನೇ ಸಾಲಿಗೆ ಸದರಿ ಪ್ರಶ್ನೆಕೋಠಿಗಳನ್ನು ಪರಿಷ್ಕರಿಸಲಾಗಿದೆ ಮತ್ತು ಹೊಸ ಪಠ್ಯಪುಸ್ತಕಗಳಿಗೆ ಪ್ರಶ್ನೆಕೋಠಿಗಳನ್ನು ರಚಿಸಲಾಗಿದೆ.
8. 1 ರಿಂದ 5ನೇ ತರಗತಿಗಳಿಗೆ 10 ಅಂಕಗಳಿಗೆ ಲಿಖಿತ ಹಾಗೂ 05 ಅಂಕಗಳಿಗೆ ಮೌಖಿಕ ಒಟ್ಟು 15 ಅಂಕಗಳಿಗೆ ಎಲ್ಲಾ ರೀತಿಯ ವಸ್ತು ನಿಷ್ಠ ಪ್ರಶ್ನೆಗಳು ಮತ್ತು ವಿವರಣಾತ್ಮಕ ಪ್ರಶ್ನೆಗಳನ್ನು ಒಳಗೊಂಡಂತೆ ಕಲಿಕಾ ಫಲಾಧಾರಿತ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಿ ಮೌಲ್ಯಾಂಕನ ಮಾಡುವುದು ಹಾಗೂ SATS ತಂತ್ರಾಂಶದಲ್ಲಿ ಇಂದೀಕರಿಸುವುದು.
9. 6 ಮತ್ತು 7ನೇ ತರಗತಿಗಳಿಗೆ 20 ಅಂಕಗಳಿಗೆ ವಸ್ತು ನಿಷ್ಠ ಹಾಗೂ ವಿವರಣಾತ್ಮಕ ಪ್ರಶ್ನೆಗಳನ್ನೊಳಗೊಂಡ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸಿ ಲಿಖಿತ ಮೌಲ್ಯಾಂಕನ ಮಾಡುವುದು ಹಾಗೂ SATS ತಂತ್ರಾಂಶದಲ್ಲಿ ಇಂದೀಕರಿಸುವುದು.
10. 8 ರಿಂದ 10ನೇ ತರಗತಿಗಳಿಗೆ 20 ಅಂಕಗಳಿಗೆ LBA ಪ್ರಶ್ನೆಕೋಠಿಯ ಬಹು ಆಯ್ಕೆಯ ಪ್ರಶ್ನೆಗಳು ಹಾಗೂ ವಿವರಣಾತ್ಮಕ ಪ್ರಶ್ನೆಗಳನ್ನೊಳಗೊಂಡ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸಿ ಲಿಖಿತ ಮೌಲ್ಯಾಂಕನ ಮಾಡುವುದು ಹಾಗೂ SATS ತಂತ್ರಾಂಶದಲ್ಲಿ ಇಂದೀಕರಿಸುವುದು.
11. ಪಾಠ ಆಧಾರಿತ ಮೌಲ್ಯಾಂಕನ ಪ್ರಶ್ನೆಕೋಠಿಯನ್ನು ಆಧರಿಸಿ ರೂಪಣಾತ್ಮಕ (FA) ಹಾಗೂ ಸಂಕಲನಾತ್ಮಕ (SA) ಮೌಲ್ಯಾಂಕನ ಕೈಗೊಂಡು, ವಿದ್ಯಾರ್ಥಿಗಳ ಕಲಿಕೆಯ ಪ್ರಗತಿಯನ್ನು SATS ತಂತ್ರಾಂಶದಲ್ಲಿ ಕಡ್ಡಾಯವಾಗಿ ಇಂದೀಕರಿಸುವುದು.
12. SATS ನಲ್ಲಿ LBA ವಿಶ್ಲೇಷಣಾ ವರದಿಯನ್ನು ಆಧರಿಸಿ, ಪ್ರತಿ ಮೌಲ್ಯಾಂಕನದ ನಂತರ ವಿದ್ಯಾರ್ಥಿಗಳ ಕಲಿಕಾ ಸಾಧನೆಗೆ ಕ್ರಮವಹಿಸುವುದು.
13. 2026-27ನೇ ಸಾಲಿಗೆ ಇಲಾಖಾವತಿಯಿಂದ ಸಮಗ್ರ ಪ್ರಗತಿ ಪತ್ರವನ್ನು (Holistic Progress Card) ಸಿದ್ಧಪಡಿಸಿದ್ದು, ಶಾಲಾ ಶೈಕ್ಷಣಿಕ ದಿನಚರಿಯಲ್ಲಿ ಅಳವಡಿಸಿ ಮುದ್ರಿಸಿ, ವಿದ್ಯಾರ್ಥಿಗಳಿಗೆ ಸರಬರಾಜು ಮಾಡಲಾಗಿದೆ. ನಿಯಮಿತವಾಗಿ ದಿನಚರಿಯನ್ನು ಬಳಸುವುದರ ಜೊತೆಗೆ ಸಮಗ್ರ ಪ್ರಗತಿ ಪತ್ರವನ್ನು ಭರ್ತಿ ಮಾಡಿ ಕಾಲಕಾಲಕ್ಕೆ ವಿದ್ಯಾರ್ಥಿಗಳು ಹಾಗೂ ಪೋಷಕರ ಗಮನಕ್ಕೆ ತರುವುದು.

Scanned with OKEN Scanner

14. 2026-27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಸೇತುಬಂಧ ಉಪಕ್ರಮ, ಪಾಠ ಆಧಾರಿತ ಮೌಲ್ಯಾಂಕನ, ರೂಪಣಾತ್ಮಕ ಹಾಗೂ ಸಂಕಲನಾತ್ಮಕ ಮೌಲ್ಯಾಂಕನ ನಿರ್ವಹಿಸಲು ಅನುವಾಗುವಂತೆ ಸದರಿ ಸುತ್ತೋಲೆಯಲ್ಲಿ ಮಾಹಿತಿಯನ್ನು ನೀಡಲಾಗಿದೆ. ಅದರಂತೆ, ಮೇಲುಸ್ತುವಾರಿ ಅಧಿಕಾರಿಗಳು ಭೇಟಿ ಸಮಯದಲ್ಲಿ ಶಾಲಾ ಹಂತದಲ್ಲಿ ಕ್ರಮವಹಿಸುತ್ತಿರುವ ಬಗ್ಗೆ ಖಾತ್ರಿಪಡಿಸಿಕೊಂಡು ನಿರಂತರವಾಗಿ ಅನುಪಾಲನೆ ಮಾಡುವುದು.

**1 ರಿಂದ 5ನೇ ತರಗತಿಗಳಿಗೆ ಮೌಲ್ಯಾಂಕನ (Assessment) ನಿರ್ವಹಣೆ**

| ವಿವರ | ಅಂಕಗಳು | ಚಟುವಟಿಕೆ ನಿರ್ವಹಿಸಬೇಕಾದ ಅವಧಿ |
|---|---|---|
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಮೊದಲನೇ ರೂಪಣಾತ್ಮಕ ಮೌಲ್ಯಾಂಕನ FA-1:**<br>➢ 1ನೇ ರಿಂದ 3ನೇ ತರಗತಿಗಳಿಗೆ ಶೇ.20 ಮತ್ತು 4 ಮತ್ತು 5ನೇ ತರಗತಿಗಳಿಗೆ ಶೇ.25 ಹಾಗೂ 4 ಮತ್ತು 5ನೇ ದ್ವಿಭಾಷಾ ತರಗತಿಗಳಿಗೆ ಶೇ.20 ವಿಷಯವಾರು ಪಠ್ಯವನ್ನು FA-1 ಕ್ಕೆ ಪರಿಗಣಿಸುವುದು.<br>**(ದಿ:16-06-2026 ರಿಂದ 27-07-2026 ರವರೆಗಿನ ಪಠ್ಯ)**<br>➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿವರ್ತಿಸುವುದು. | 15 | • LBA ಸಂಬಂಧ ಭಾಷೆಗಳಲ್ಲಿ 1 ಪಾಠ ಮತ್ತು 1 ಪದ್ಯ, ಪರಿಸರ ಅಧ್ಯಯನ ಹಾಗೂ ಗಣಿತ ವಿಷಯಗಳಲ್ಲಿ ಪ್ರತಿ ಪಾಠಕ್ಕೆ LBA ಪ್ರಶ್ನೆಕೋಠಿಯನ್ನಾಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, 10 ಅಂಕಗಳಿಗೆ ಲಿಖಿತ ಹಾಗೂ 05 ಅಂಕಗಳಿಗೆ ಮೌಖಿಕ ಒಟ್ಟು 15 ಅಂಕಗಳಿಗೆ ಮೌಲ್ಯಾಂಕನ ಮಾಡುವುದು.<br>• ದಿ: 28-07-2026 ರಿಂದ 30-07-2026 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-1 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಎರಡನೇ ರೂಪಣಾತ್ಮಕ ಮೌಲ್ಯಾಂಕನ FA-2**:<br>➢ 1ನೇ ರಿಂದ 3ನೇ ತರಗತಿಗಳಿಗೆ ಶೇ.15 ಮತ್ತು 4 ಮತ್ತು 5ನೇ ತರಗತಿಗಳಿಗೆ ಶೇ.15 ಹಾಗೂ 4 ಮತ್ತು 5ನೇ ದ್ವಿಭಾಷಾ ತರಗತಿಗಳಿಗೆ ಶೇ.20 ವಿಷಯವಾರು ಪಠ್ಯವನ್ನು FA-2 ಕ್ಕೆ ಪರಿಗಣಿಸುವುದು.<br>**(ದಿ:01-08-2026 ರಿಂದ 26-08-2026 ರವರೆಗಿನ ಪಠ್ಯ)** | 15 | • LBA ಸಂಬಂಧ ಭಾಷೆಗಳಲ್ಲಿ 1 ಪಾಠ ಮತ್ತು 1 ಪದ್ಯ, ಪರಿಸರ ಅಧ್ಯಯನ ಹಾಗೂ ಗಣಿತ ವಿಷಯಗಳಲ್ಲಿ ಪ್ರತಿ ಪಾಠಕ್ಕೆ LBA ಪ್ರಶ್ನೆಕೋಠಿಯನ್ನಾಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, 10 ಅಂಕಗಳಿಗೆ ಲಿಖಿತ ಹಾಗೂ 05 ಅಂಕಗಳಿಗೆ ಮೌಖಿಕ ಒಟ್ಟು 15 ಅಂಕಗಳಿಗೆ ಮೌಲ್ಯಾಂಕನ ಮಾಡುವುದು.<br>• ದಿ: 27-08-2026 ಮತ್ತು 31-08-2026 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-2 ಮೌಲ್ಯಾಂಕನ ಹಮ್ಮಿಕೊಳ್ಳುವುದು. |

Scanned with OKEN Scanner

| | | |
|---|---|---|
| ➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿವರ್ತಿಸುವುದು. | | |
| **ಮೊದಲನೇ ಸಂಕಲನಾತ್ಮಕ ಮೌಲ್ಯಾಂಕನ SA-1:**<br>➢ 1 ರಿಂದ 3ನೇ ತರಗತಿಗಳಿಗೆ ಶೇ.15 ಮತ್ತು 4 ಮತ್ತು 5ನೇ ತರಗತಿಗಳಿಗೆ ಶೇ.10 ಹಾಗೂ 4 ಮತ್ತು 5ನೇ ದ್ವಿಭಾಷಾ ತರಗತಿಗಳಿಗೆ ಶೇ.10 ಪಠ್ಯವನ್ನೊಳಗೊಂಡಂತೆ ಒಟ್ಟಾರೆ ಪಠ್ಯಪುಸ್ತಕದ ಶೇ.50 ಪಠ್ಯವನ್ನು SA-1 ಗೆ ಪರಿಗಣಿಸುವುದು.<br>**(ದಿ:16-06-2026 ರಿಂದ 22-09-2026 ರವರೆಗಿನ ಪಠ್ಯ)**<br>➢ ಎಲ್ಲಾ ಭಾಷೆ ಮತ್ತು ಕೋರ್ ವಿಷಯಗಳಿಗೆ 10 ಅಂಕಗಳಿಗೆ ಮೌಖಿಕ ಮತ್ತು 40 ಅಂಕಗಳಿಗೆ ಲಿಖಿತ, ಒಟ್ಟಾರೆ 50 ಅಂಕಗಳಿಗೆ ಮೌಲ್ಯಾಂಕನ ನಡೆಸಿ 20 ಅಂಕಗಳಿಗೆ ಪರಿವರ್ತಿಸುವುದು. | 20 | • ದಿ: 23-09-2026 ರಿಂದ 30-09-2026 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, ಮೌಖಿಕ ಮತ್ತು ಲಿಖಿತ ಮೌಲ್ಯಾಂಕನ ಮಾಡುವುದು.<br>• ದಿ: 29-10-2026 ರಂದು ಪ್ರಾಥಮಿಕ ವಿಭಾಗದ ಮೊದಲನೇ ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ **ಕೃತಿಸಂಪುಟ / ಉತ್ತರಪತ್ರಿಕೆಗಳ** ಮುಖೇನ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು SDMC ಹಾಗೂ ಪೋಷಕರೊಂದಿಗೆ ಹಂಚಿಕೊಳ್ಳುವುದು.<br>• **ದಿನಾಂಕ: 03-10-2026 ರಿಂದ 21-10-2026 ರವರೆಗೆ ದಸರಾ ರಜೆ.** |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಮೂರನೇ ರೂಪಣಾತ್ಮಕ ಮೌಲ್ಯಾಂಕನ FA-3**<br>➢ 1ನೇ ರಿಂದ 3ನೇ ತರಗತಿಗಳಿಗೆ ಶೇ.20 ಮತ್ತು 4 ಮತ್ತು 5ನೇ ತರಗತಿಗಳಿಗೆ ಶೇ.20 ಹಾಗೂ 4 ಮತ್ತು 5ನೇ ದ್ವಿಭಾಷಾ ತರಗತಿಗಳಿಗೆ ಶೇ.20 ವಿಷಯವಾರು ಪಠ್ಯವನ್ನು FA-3 ಗೆ ಪರಿಗಣಿಸುವುದು.<br>**(ದಿ: 22-10-2026 ರಿಂದ 16-12-2026 ರವರೆಗಿನ ಪಠ್ಯ)**<br>ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿವರ್ತಿಸುವುದು. | 15 | • LBA ಸಂಬಂಧ ಭಾಷೆಗಳಲ್ಲಿ 1 ಪಾಠ ಮತ್ತು 1 ಪದ್ಯ, ಪರಿಸರ ಅಧ್ಯಯನ ಹಾಗೂ ಗಣಿತ ವಿಷಯಗಳಲ್ಲಿ ಪ್ರತಿ ಪಾಠಕ್ಕೆ LBA ಪ್ರಶ್ನೆಕೋಠಿಯನ್ನಾಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, 10 ಅಂಕಗಳಿಗೆ ಲಿಖಿತ ಹಾಗೂ 05 ಅಂಕಗಳಿಗೆ ಮೌಖಿಕ ಒಟ್ಟು 15 ಅಂಕಗಳಿಗೆ ಮೌಲ್ಯಾಂಕನ ಮಾಡುವುದು.<br>• ದಿ: 17-12-2026 ರಿಂದ 19-12-2026 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-3 ಮೌಲ್ಯಾಂಕನ ಹಮ್ಮಿಕೊಳ್ಳುವುದು. |

Scanned with OKEN Scanner

| | | |
|---|---|---|
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ನಾಲ್ಕನೇ ರೂಪಣಾತ್ಮಕ ಮೌಲ್ಯಾಂಕನ FA-4**<br>➢ 1ನೇ ರಿಂದ 3ನೇ ತರಗತಿಗಳಿಗೆ ಶೇ.20 ಮತ್ತು 4 ಮತ್ತು 5ನೇ ತರಗತಿಗಳಿಗೆ ಶೇ.20 ಹಾಗೂ 4 ಮತ್ತು 5ನೇ ದ್ವಿಭಾಷಾ ತರಗತಿಗಳಿಗೆ ಶೇ.20 ವಿಷಯವಾರು ಪಠ್ಯವನ್ನು FA-4 ಕ್ಕೆ ಪರಿಗಣಿಸುವುದು.<br>**(ದಿ: 20-12-2026 ರಿಂದ 07-02-2027 ರವರೆಗಿನ ಪಠ್ಯ)**<br>ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳ ಒಟ್ಟಾರೆ ಸಾಧನೆಯನ್ನು 15 ಅಂಕಗಳಿಗೆ ಪರಿವರ್ತಿಸುವುದು. | 15 | • LBA ಸಂಬಂಧ ಭಾಷೆಗಳಲ್ಲಿ 1 ಪಾಠ ಮತ್ತು 1 ಪದ್ಯ, ಪರಿಸರ ಅಧ್ಯಯನ ಹಾಗೂ ಗಣಿತ ವಿಷಯಗಳಲ್ಲಿ ಪ್ರತಿ ಪಾಠಕ್ಕೆ LBA ಪ್ರಶ್ನೆಕೋಠಿಯನ್ನಾಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, 10 ಅಂಕಗಳಿಗೆ ಲಿಖಿತ ಹಾಗೂ 05 ಅಂಕಗಳಿಗೆ ಮೌಖಿಕ ಒಟ್ಟು 15 ಅಂಕಗಳಿಗೆ ಮೌಲ್ಯಾಂಕನ ಮಾಡುವುದು.<br>• ದಿ: 08-02-2027 ರಿಂದ 10-02-2027 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-4 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **1 ರಿಂದ 5ನೇ ತರಗತಿ: ಎರಡನೇ ಸಂಕಲನಾತ್ಮಕ ಮೌಲ್ಯಾಂಕನ SA-2**<br>➢ ಫೆಬ್ರುವರಿ ಮಾಹೆಯ 1ನೇ ರಿಂದ 3ನೇ ತರಗತಿಗಳಿಗೆ ಶೇ.10 ಮತ್ತು 4 ಮತ್ತು 5ನೇ ತರಗತಿಗಳಿಗೆ ಶೇ.10 ಹಾಗೂ 4 ಮತ್ತು 5ನೇ ದ್ವಿಭಾಷಾ ತರಗತಿಗಳಿಗೆ ಶೇ.10 ಪಠ್ಯವನ್ನೊಳಗೊಂಡಂತೆ ಒಟ್ಟಾರೆ ಪಠ್ಯಪುಸ್ತಕದ ಶೇ.50 ಪಠ್ಯವನ್ನು SA-2 ಕ್ಕೆ ಪರಿಗಣಿಸುವುದು.<br>**(ದಿ:22-10-2026 ರಿಂದ 14-03-2027 ರವರೆಗಿನ ಪಠ್ಯ ಮತ್ತು ಪುನರಾವರ್ತನೆ)**<br>➢ ಎಲ್ಲಾ ಭಾಷೆ ಮತ್ತು ಕೋರ್ ವಿಷಯಗಳಿಗೆ 10 ಅಂಕಗಳಿಗೆ ಮೌಖಿಕ ಮತ್ತು 40 ಅಂಕಗಳಿಗೆ ಲಿಖಿತ, ಒಟ್ಟಾರೆ 50 ಅಂಕಗಳಿಗೆ ಮೌಲ್ಯಾಂಕನ ನಡೆಸಿ 20 ಅಂಕಗಳಿಗೆ ಪರಿವರ್ತಿಸುವುದು.<br>➢ SATS ನಲ್ಲಿ ದಾಖಲಿಸಿರುವ FA-1, FA-2, FA-3, FA-4 ಮತ್ತು SA-1 ಅಂಕಗಳೊಂದಿಗೆ SA-2 ನ ಪರಿವರ್ತಿಸಿದ 20 ಅಂಕಗಳನ್ನು ಮೇಲ್ಕಂಡಂತೆ ಪರಿಗಣಿಸಿ, ಅಂತಿಮವಾಗಿ ಫಲಿತಾಂಶ ನಿರ್ಣಯಿಸಲು ಅಂಕಗಳನ್ನು 15+15+15+15+20+20=100 ರಂತೆ ಪರಿಗಣಿಸುವುದು. | 20<br><br>ಒಟ್ಟು 100 ಅಂಕಗಳಿಗೆ | ದಿ: 15-03-2027 ರಿಂದ 20-03-2027 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, ಮೌಖಿಕ ಮತ್ತು ಲಿಖಿತ ಮೌಲ್ಯಾಂಕನ ಮಾಡುವುದು.<br><br>• ಏಪ್ರಿಲ್ ತಿಂಗಳಿನಲ್ಲಿ ನಡೆಯುವ ಪ್ರಾಥಮಿಕ ಶಾಲಾ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ ಫಲಿತಾಂಶ ಪ್ರಕಟಿಸುವುದು ಹಾಗೂ **ಕೃತಿಸಂಪುಟ / ಉತ್ತರ ಪತ್ರಿಕೆಗಳ** ಮುಖೇನ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು SDMC ಹಾಗೂ ಪೋಷಕರೊಂದಿಗೆ ಹಂಚಿಕೊಳ್ಳುವುದು. |

Scanned with OKEN Scanner

**6 ರಿಂದ 8ನೇ ತರಗತಿಗಳಿಗೆ ಮೌಲ್ಯಾಂಕನ (Assessment) ನಿರ್ವಹಣೆ:**

| | | |
|---|---|---|
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಮೊದಲನೇ ರೂಪಣಾತ್ಮಕ ಮೌಲ್ಯಾಂಕನ FA-1:**<br>➢ 6 ರಿಂದ 8ನೇ ತರಗತಿಗಳಿಗೆ ವಿಷಯವಾರು ಪಠ್ಯಪುಸ್ತಕದ ಶೇ.25 ರಷ್ಟು ಪಠ್ಯವನ್ನು FA-1 ಕ್ಕೆ ಪರಿಗಣಿಸುವುದು.<br>**(ದಿ:16-06-2026 ರಿಂದ 27-07-2026 ರವರೆಗಿನ ಪಠ್ಯ)**<br>➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳ ಒಟ್ಟಾರೆ ಸಾಧನೆಯನ್ನು 10 ಅಂಕಗಳಿಗೆ ಪರಿವರ್ತಿಸುವುದು. | 10 | • LBA ಸಂಬಂಧ ಭಾಷೆಗಳಲ್ಲಿ 1 ಪಾಠ ಮತ್ತು 1 ಪದ್ಯ, ಸಮಾಜ ವಿಜ್ಞಾನದ ವಿಷಯದಲ್ಲಿ ಪ್ರತಿ 3 ಪಾಠಗಳಿಗೆ ಹಾಗೂ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಪ್ರತಿ ಪಾಠಕ್ಕೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, 20 ಅಂಕಗಳಿಗೆ ಲಿಖಿತ ಮೌಲ್ಯಾಂಕನ ಮಾಡುವುದು.<br>• ದಿ: 28-07-2026 ರಿಂದ 30-07-2026 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-1 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಎರಡನೇ ರೂಪಣಾತ್ಮಕ ಮೌಲ್ಯಾಂಕನ FA-2:**<br>➢ 6 ರಿಂದ 8ನೇ ತರಗತಿಗಳಿಗೆ FA-1 ರ ನಂತರದ ವಿಷಯವಾರು ಶೇ.15 ರಷ್ಟು ಪಠ್ಯವನ್ನು FA-2 ಕ್ಕೆ ಪರಿಗಣಿಸುವುದು.<br>**(ದಿ:01-08-2026 ರಿಂದ 26-08-2026 ರವರೆಗಿನ ಪಠ್ಯ)**<br>➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳ ಒಟ್ಟಾರೆ ಸಾಧನೆಯನ್ನು 10 ಅಂಕಗಳಿಗೆ ಪರಿವರ್ತಿಸುವುದು. | 10 | • LBA ಸಂಬಂಧ ಭಾಷೆಗಳಲ್ಲಿ 1 ಪಾಠ ಮತ್ತು 1 ಪದ್ಯ, ಸಮಾಜ ವಿಜ್ಞಾನದ ವಿಷಯದಲ್ಲಿ ಪ್ರತಿ 3 ಪಾಠಗಳಿಗೆ ಹಾಗೂ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಪ್ರತಿ ಪಾಠಕ್ಕೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, 20 ಅಂಕಗಳಿಗೆ ಲಿಖಿತ ಮೌಲ್ಯಾಂಕನ ಮಾಡುವುದು.<br>• ದಿ: 27-08-2026 ಮತ್ತು 31-08-2026 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-2 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಮೊದಲನೇ ಸಂಕಲನಾತ್ಮಕ ಮೌಲ್ಯಾಂಕನ SA-1:**<br>➢ 6 ರಿಂದ 8ನೇ ತರಗತಿಗಳಿಗೆ ಸೆಪ್ಟೆಂಬರ್ ಮಾಹೆಯ ಶೇ.10 ಪಠ್ಯವನ್ನೊಳಗೊಂಡಂತೆ ಪಠ್ಯಪುಸ್ತಕದ ಶೇ.50 ರಷ್ಟು ವಿಷಯವಾರು ಪಠ್ಯವನ್ನು SA-1 ಕ್ಕೆ ಪರಿಗಣಿಸುವುದು. | 30 | • ದಿ: 23-09-2026 ರಿಂದ 30-09-2026 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, ಮೌಖಿಕ ಮತ್ತು ಲಿಖಿತ ಮೌಲ್ಯಾಂಕನ ಮಾಡುವುದು.<br>• ದಿ:30-10-2025 ರಂದು ಪ್ರಾಥಮಿಕ |

Scanned with OKEN Scanner

| | | |
|---|---|---|
| **(ದಿ:16-06-2026 ರಿಂದ 22-09-2026 ರವರೆಗಿನ ಪಠ್ಯ)**<br><br>➢ ಮೌಲ್ಯಾಂಕನಕ್ಕೆ ಎಲ್ಲಾ ಭಾಷೆ ಮತ್ತು ಕೋರ್ ವಿಷಯಗಳಿಗೆ 10 ಅಂಕಗಳಿಗೆ ಮೌಖಿಕ ಮತ್ತು 40 ಅಂಕಗಳಿಗೆ ಲಿಖಿತ, ಒಟ್ಟಾರೆ 50 ಅಂಕಗಳಿಗೆ ನಡೆಸಿ ನಂತರ 30 ಅಂಕಗಳಿಗೆ ಪರಿವರ್ತಿಸುವುದು. | | ಶಾಲೆ ಹಾಗೂ ಪ್ರೌಢ ಶಾಲಾ ವಿಭಾಗದ ಮೊದಲನೇ ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ **ಕೃತಿಸಂಪುಟ / ಉತ್ತರ ಪತ್ರಿಕೆಗಳ** ಮುಖೇನ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು SDMC ಹಾಗೂ ಪೋಷಕರೊಂದಿಗೆ ಹಂಚಿಕೊಳ್ಳುವುದು.<br>• **ದಿನಾಂಕ: 03-10-2026 ರಿಂದ 21-10-2026 ರವರೆಗೆ ದಸರಾ ರಜೆ.** |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಮೂರನೇ ರೂಪಣಾತ್ಮಕ ಮೌಲ್ಯಾಂಕನ FA-3**<br>➢ 6 ರಿಂದ 8ನೇ ತರಗತಿಗಳಿಗೆ ಶೇ.20 ರಷ್ಟು ಪಠ್ಯವನ್ನು FA-3 ಕ್ಕೆ ಪರಿಗಣಿಸುವುದು.<br>**(ದಿ:22-10-2026 ರಿಂದ 16-12-2026 ರವರೆಗಿನ ಪಠ್ಯ)**<br>➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳ ಒಟ್ಟಾರೆ ಸಾಧನೆಯನ್ನು 10 ಅಂಕಗಳಿಗೆ ಪರಿವರ್ತಿಸುವುದು. | 10 | • LBA ಸಂಬಂಧ ಭಾಷೆಗಳಲ್ಲಿ 1 ಪಾಠ ಮತ್ತು 1 ಪದ್ಯ, ಸಮಾಜ ವಿಜ್ಞಾನದ ವಿಷಯದಲ್ಲಿ ಪ್ರತಿ 3 ಪಾಠಗಳಿಗೆ ಹಾಗೂ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಪ್ರತಿ ಪಾಠಕ್ಕೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, 20 ಅಂಕಗಳಿಗೆ ಲಿಖಿತ ಮೌಲ್ಯಾಂಕನ ಮಾಡುವುದು.<br>• ದಿ: 17-12-2026 ರಿಂದ 19-12-2026 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-3 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ನಾಲ್ಕನೇ ರೂಪಣಾತ್ಮಕ ಮೌಲ್ಯಾಂಕನ FA-4**<br>➢ 6 ರಿಂದ 8ನೇ ತರಗತಿಗಳಿಗೆ ಶೇ.20 ರಷ್ಟು ಪಠ್ಯವನ್ನು FA-4 ಕ್ಕೆ ಪರಿಗಣಿಸುವುದು.<br>**(ದಿ:20-12-2026 ರಿಂದ 07-02-2027 ರವರೆಗಿನ ಪಠ್ಯ)**<br>➢ ಈ ಅವಧಿಯಲ್ಲಿ ನಿರ್ವಹಿಸಿದ ಪಾಠ ಆಧಾರಿತ ಮೌಲ್ಯಾಂಕನಗಳು, ಗೃಹಪಾಠಗಳು, Project ಗಳು, ಚಟುವಟಿಕೆ ಪುಸ್ತಕಗಳಲ್ಲಿನ ಚಟುವಟಿಕೆಗಳು ಮತ್ತು ಇತರೆ ಲಿಖಿತ ಮತ್ತು ಮೌಖಿಕ ಚಟುವಟಿಕೆಗಳನ್ನು ಆಧರಿಸಿ, ಗಳಿಸಿದ ಕಲಿಕಾ ಫಲಗಳ ಒಟ್ಟಾರೆ ಸಾಧನೆಯನ್ನು 10 ಅಂಕಗಳಿಗೆ ಪರಿವರ್ತಿಸುವುದು. | 10 | • LBA ಸಂಬಂಧ ಭಾಷೆಗಳಲ್ಲಿ 1 ಪಾಠ ಮತ್ತು 1 ಪದ್ಯ, ಸಮಾಜ ವಿಜ್ಞಾನದ ವಿಷಯದಲ್ಲಿ ಪ್ರತಿ 3 ಪಾಠಗಳಿಗೆ ಹಾಗೂ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಪ್ರತಿ ಪಾಠಕ್ಕೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, 20 ಅಂಕಗಳಿಗೆ ಲಿಖಿತ ಮೌಲ್ಯಾಂಕನ ಮಾಡುವುದು.<br>• ದಿ: 08-02-2027 ರಿಂದ 10-02-2027 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-4 ಮೌಲ್ಯಾಂಕನ ಹಮ್ಮಿಕೊಳ್ಳುವುದು. |

Scanned with OKEN Scanner

| | | |
|---|---|---|
| **ಎರಡನೇ ಸಂಕಲನಾತ್ಮಕ ಮೌಲ್ಯಾಂಕನ SA-2**<br>➢ 6 ಮತ್ತು 7ನೇ ತರಗತಿಗಳಿಗೆ ಫೆಬ್ರುವರಿ ಮಾಹೆಯ ಶೇ.10 ರಷ್ಟು ಪಠ್ಯವನ್ನೊಳಗೊಂಡಂತೆ ಒಟ್ಟಾರೆ ಪಠ್ಯಪುಸ್ತಕದ ಶೇ.50 ಪಠ್ಯವನ್ನು SA-2 ಕ್ಕೆ ಪರಿಗಣಿಸುವುದು.<br>**(ದಿ: 22-10-2026 ರಿಂದ 14-03-2027 ರವರೆಗಿನ ಪಠ್ಯ ಮತ್ತು ಪುನರಾವರ್ತನೆ)**<br>➢ ಎಲ್ಲಾ ಭಾಷೆ ಮತ್ತು ಕೋರ್ ವಿಷಯಗಳಿಗೆ 10 ಅಂಕಗಳಿಗೆ ಮೌಖಿಕ ಮತ್ತು 40 ಅಂಕಗಳಿಗೆ ಲಿಖಿತ, ಒಟ್ಟಾರೆ 50 ಅಂಕಗಳಿಗೆ ನಡೆಸಿ ನಂತರ 30 ಅಂಕಗಳಿಗೆ ಪರಿವರ್ತಿಸುವುದು.<br>➢ ಅಂತಿಮವಾಗಿ ಫಲಿತಾಂಶ ನಿರ್ಣಯಿಸಲು FA-1, FA-2, FA-3, FA-4, SA-1 ಮತ್ತು SA-2 ಗಳ ಅಂಕಗಳಿಗೆ 10+10+10+10+30+30=100 ರಂತೆ ಪರಿಗಣಿಸಿ ಫಲಿತಾಂಶ ನಿರ್ಣಯಿಸುವುದು. | 30 | ದಿ: 15-03-2027 ರಿಂದ 20-03-2027 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, ಮೌಖಿಕ ಮತ್ತು ಲಿಖಿತ ಮೌಲ್ಯಾಂಕನ ಮಾಡುವುದು. |
| **8ನೇ ತರಗತಿ: ಎರಡನೇ ಸಂಕಲನಾತ್ಮಕ ಮೌಲ್ಯಾಂಕನ-SA-2**<br>➢ ಫೆಬ್ರುವರಿ ಮಾಹೆಯ ಶೇ.10 ರಷ್ಟು ಪಠ್ಯವನ್ನು ಒಳಗೊಂಡಂತೆ 8ನೇ ತರಗತಿಗೆ ಜೂನ್-2026 ರಿಂದ ಮಾರ್ಚ್-2027 ರವರೆಗಿನ ವಾರ್ಷಿಕ ಪಠ್ಯವನ್ನು ಪರಿಗಣಿಸುವುದು<br>➢ ಎಲ್ಲಾ ಭಾಷೆ ಮತ್ತು ಕೋರ್ ವಿಷಯಗಳಿಗೆ 10 ಅಂಕಗಳಿಗೆ ಮೌಖಿಕ ಮತ್ತು 50 ಅಂಕಗಳಿಗೆ ಲಿಖಿತ, ಒಟ್ಟಾರೆ 60 ಅಂಕಗಳಿಗೆ ನಡೆಸಿ ನಂತರ 30 ಅಂಕಗಳಿಗೆ ಪರಿವರ್ತಿಸುವುದು.<br>➢ ಅಂತಿಮವಾಗಿ ಫಲಿತಾಂಶ ನಿರ್ಣಯಿಸಲು FA-1, FA-2, FA-3, FA-4, SA-1 ಮತ್ತು SA-2 ಗಳ ಅಂಕಗಳಿಗೆ 10+10+10+10+30+30=100 ರಂತೆ ಪರಿಗಣಿಸಿ ಫಲಿತಾಂಶ ನಿರ್ಣಯಿಸುವುದು. | 30<br>ಒಟ್ಟು 100 ಅಂಕಗಳಿಗೆ | ದಿ: 15-03-2027 ರಿಂದ 20-03-2027 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, ಮೌಖಿಕ ಮತ್ತು ಲಿಖಿತ ಮೌಲ್ಯಾಂಕನ ಮಾಡುವುದು.<br>ಏಪ್ರಿಲ್ ತಿಂಗಳಿನಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ವಿಭಾಗದಲ್ಲಿ ನಡೆಯುವ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ SDMC ಹಾಗೂ ಪೋಷಕರ ಸಭೆ ಕರೆದು, ಫಲಿತಾಂಶ ಪ್ರಕಟಿಸುವುದು ಹಾಗೂ ಮುಂದಿನ ವರ್ಷದ ಶಾಲಾ ಶೈಕ್ಷಣಿಕ ಯೋಜನೆಯನ್ನು ಪರಿಚಯಿಸುವುದು. |

Scanned with OKEN Scanner

**9 & 10 ನೇ ತರಗತಿಗಳಿಗೆ ಮೌಲ್ಯಾಂಕನ (Assessment) ನಿರ್ವಹಣೆ:**

| | | |
|---|---|---|
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಮೊದಲನೇ ರೂಪಣಾತ್ಮಕ ಮೌಲ್ಯಾಂಕನ FA-1**<br>➢ 9ನೇ ಮತ್ತು 10ನೇ ತರಗತಿಗೆ ಶೇ.25 ರಷ್ಟು ಪಠ್ಯವನ್ನು FA-1 ಕ್ಕೆ ಪರಿಗಣಿಸುವುದು. **(ದಿ:16-06-2026 ರಿಂದ 27-07-2026 ರವರೆಗಿನ ಪಠ್ಯ)**<br>➢ 2 ಚಟುವಟಿಕೆ / ಯೋಜನೆ 15+15 ಅಂಕಗಳು ಹಾಗೂ 1 ಲಿಖಿತ ಪರೀಕ್ಷೆ 20 ಅಂಕಗಳು.<br>➢ ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು. | 50 | • LBA ಸಂಬಂಧ ಭಾಷೆಗಳಲ್ಲಿ 1 ಪಾಠ ಮತ್ತು 1 ಪದ್ಯ, ಸಮಾಜ ವಿಜ್ಞಾನದ ವಿಷಯದಲ್ಲಿ ಪ್ರತಿ 3 ಪಾಠಗಳಿಗೆ ಹಾಗೂ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಪ್ರತಿ ಪಾಠಕ್ಕೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, 20 ಅಂಕಗಳಿಗೆ ಲಿಖಿತ ಮೌಲ್ಯಾಂಕನ ಮಾಡುವುದು.<br>• ದಿ: 28-07-2026 ರಿಂದ 30-07-2026 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-1 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಎರಡನೇ ರೂಪಣಾತ್ಮಕ ಮೌಲ್ಯಾಂಕನ FA-2**<br>➢ 9 ಮತ್ತು 10ನೇ ತರಗತಿಗಳಿಗೆ ವಿಷಯವಾರು FA-1 ರ ನಂತರದ ಶೇ.15 ರಷ್ಟು ಪಠ್ಯವನ್ನು FA-2 ಕ್ಕೆ ಪರಿಗಣಿಸುವುದು. **(ದಿ:01-08-2026 ರಿಂದ 26-08-2026 ರವರೆಗಿನ ಪಠ್ಯ)**<br>➢ 2 ಚಟುವಟಿಕೆ / ಯೋಜನೆ 15+15 ಅಂಕಗಳು ಹಾಗೂ 1 ಲಿಖಿತ ಪರೀಕ್ಷೆ 20 ಅಂಕಗಳು.<br>➢ ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು. | 50 | • LBA ಸಂಬಂಧ ಭಾಷೆಗಳಲ್ಲಿ 1 ಪಾಠ ಮತ್ತು 1 ಪದ್ಯ, ಸಮಾಜ ವಿಜ್ಞಾನದ ವಿಷಯದಲ್ಲಿ ಪ್ರತಿ 3 ಪಾಠಗಳಿಗೆ ಹಾಗೂ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಪ್ರತಿ ಪಾಠಕ್ಕೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, 20 ಅಂಕಗಳಿಗೆ ಲಿಖಿತ ಮೌಲ್ಯಾಂಕನ ಮಾಡುವುದು.<br>• ದಿ: 27-08-2026 ಮತ್ತು 31-08-2026 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-2 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಮೊದಲನೇ ಸಂಕಲನಾತ್ಮಕ ಮೌಲ್ಯಾಂಕನ SA-1**<br>➢ ಸೆಪ್ಟೆಂಬರ್ ಮಾಹೆಯ 9 ಮತ್ತು 10ನೇ ತರಗತಿಗಳಿಗೆ ಶೇ.10 ರಷ್ಟು ಪಠ್ಯವನ್ನೊಳಗೊಂಡಂತೆ ಆಯಾ ತರಗತಿ ಮತ್ತು ವಿಷಯಕ್ಕೆ ನಿಗದಿಪಡಿಸಿದ ಶೇ.50 ಪಠ್ಯವನ್ನು ಕ್ರಮವಾಗಿ ಪರಿಗಣಿಸುವುದು. **(ದಿ:16-06-2026 ರಿಂದ 22-09-2026 ರವರೆಗಿನ ಪಠ್ಯ)**<br>➢ ಪ್ರಥಮ ಭಾಷೆಗೆ 100 ಅಂಕಗಳು, ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಅಂಕಗಳಿಗೆ ಅಂದರೆ 100+80+80+80+80+80=500 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು ನಡೆಸುವುದು. | 625 | • ದಿ: 23-09-2026 ರಿಂದ 30-09-2026 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಸಂಕಲನಾತ್ಮಕ ಮೌಲ್ಯಾಂಕನ ಮಾಡುವುದು.<br>• ದಿನಾಂಕ: 30-10-2026 ರಂದು ಪ್ರೌಢ ಶಾಲಾ ವಿಭಾಗದ ಮೊದಲನೇ ಸಮುದಾಯದತ್ತ ಶಾಲಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ **ಕೃತಿಸಂಪುಟ / ಉತ್ತರ ಪತ್ರಿಕೆಗಳ** ಮುಖೇನ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು SDMC ಮತ್ತು ಪೋಷಕರೊಂದಿಗೆ ಹಂಚಿಕೊಳ್ಳುವುದು.<br>• ದಿನಾಂಕ: **03-10-2026 ರಿಂದ 21-10-2026 ರವರೆಗೆ ದಸರಾ ರಜೆ.** |

Scanned with OKEN Scanner

| | | |
|---|---|---|
| **ಆಂತರಿಕ ಮೌಲ್ಯಾಂಕನ:** ಎರಡು ರೂಪಣಾತ್ಮಕ ಮೌಲ್ಯಾಂಕನಗಳ (FA 1 + FA 2) ಒಟ್ಟು 100 ಅಂಕಗಳನ್ನು ಪ್ರಥಮ ಭಾಷೆಗೆ 25 ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 20 ಅಂಕಗಳಿಗೆ ಅಂದರೆ 25+20+20+20+20+20=125 ಪರಿವರ್ತಿಸಿ ಆಂತರಿಕ ಮೌಲ್ಯಾಂಕನಕ್ಕೆ ಪರಿಗಣಿಸುವುದು. | | |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ಮೂರನೇ ರೂಪಣಾತ್ಮಕ ಮೌಲ್ಯಾಂಕನ FA-3**<br>➢ 9ನೇ ಮತ್ತು 10ನೇ ತರಗತಿಗೆ ಶೇ.25 ರಷ್ಟು ಪಠ್ಯವನ್ನು FA-3 ಕ್ಕೆ ಪರಿಗಣಿಸುವುದು. **(ದಿ:22-10-2026 ರಿಂದ 16-12-2026 ರವರೆಗಿನ ಪಠ್ಯ)**<br>➢ 2 ಚಟುವಟಿಕೆ / ಯೋಜನೆ 15+15 ಅಂಕಗಳು ಹಾಗೂ 1 ಲಿಖಿತ ಪರೀಕ್ಷೆ 20 ಅಂಕಗಳು.<br>➢ ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು. | 50 | • LBA ಸಂಬಂಧ ಭಾಷೆಗಳಲ್ಲಿ 1 ಪಾಠ ಮತ್ತು 1 ಪದ್ಯ, ಸಮಾಜ ವಿಜ್ಞಾನದ ವಿಷಯದಲ್ಲಿ ಪ್ರತಿ 3 ಪಾಠಗಳಿಗೆ ಹಾಗೂ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಪ್ರತಿ ಪಾಠಕ್ಕೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, 20 ಅಂಕಗಳಿಗೆ ಲಿಖಿತ ಮೌಲ್ಯಾಂಕನ ಮಾಡುವುದು.<br>• ದಿ: 17-12-2026 ರಿಂದ 19-12-2026 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-3 ಮೌಲ್ಯಾಂಕನ ಹಮ್ಮಿಕೊಳ್ಳುವುದು. |
| **ಪಾಠ ಆಧಾರಿತ ಮೌಲ್ಯಾಂಕನ ಹಾಗೂ ನಾಲ್ಕನೇ ರೂಪಣಾತ್ಮಕ ಮೌಲ್ಯಾಂಕನ FA-4**<br>➢ 9ನೇ ಮತ್ತು 10ನೇ ತರಗತಿಗೆ ಶೇ.25 ರಷ್ಟು ಪಠ್ಯವನ್ನು FA-4ಕ್ಕೆ ಪರಿಗಣಿಸುವುದು. **(ದಿ:20-12-2026 ರಿಂದ 07-02-2027 ರವರೆಗಿನ ಪಠ್ಯ)**<br>➢ 2 ಚಟುವಟಿಕೆ / ಯೋಜನೆ 15+15 ಅಂಕಗಳು ಹಾಗೂ 1 ಲಿಖಿತ ಪರೀಕ್ಷೆ 20 ಅಂಕಗಳು.<br>➢ ಒಟ್ಟಾರೆ ಸಾಧನೆಯನ್ನು 50 ಅಂಕಗಳಿಗೆ ಪರಿಗಣಿಸುವುದು. | 50 | • LBA ಸಂಬಂಧ ಭಾಷೆಗಳಲ್ಲಿ 1 ಪಾಠ ಮತ್ತು 1 ಪದ್ಯ, ಸಮಾಜ ವಿಜ್ಞಾನದ ವಿಷಯದಲ್ಲಿ ಪ್ರತಿ 3 ಪಾಠಗಳಿಗೆ ಹಾಗೂ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಪ್ರತಿ ಪಾಠಕ್ಕೆ LBA ಪ್ರಶ್ನೆಕೋಠಿಯನ್ನು ಆಧರಿಸಿ ಪ್ರಶ್ನೆಪತ್ರಿಕೆ ಸಿದ್ಧಪಡಿಸಿ, 20 ಅಂಕಗಳಿಗೆ ಲಿಖಿತ ಮೌಲ್ಯಾಂಕನ ಮಾಡುವುದು.<br>• ದಿ: 08-02-2027 ರಿಂದ 10-02-2027 ರವರೆಗೆ ಆಯಾ ವಿಷಯದ ಬೋಧನಾ ಅವಧಿಯಲ್ಲಿ FA-4 ಮೌಲ್ಯಾಂಕನ ಹಮ್ಮಿಕೊಳ್ಳುವುದು |
| **9ನೇ ತರಗತಿಗೆ ಶೇ.100 ರಷ್ಟು ಪಠ್ಯವನ್ನು ಪರಿಗಣಿಸಿ ಪೂರ್ವ ಸಿದ್ಧತಾ ಪರೀಕ್ಷೆ ನಡೆಸುವುದು.**<br>➢ ಪ್ರಥಮ ಭಾಷೆ 100 ಲಿಖಿತ + 25 ಆಂತರಿಕ =125 ಅಂಕಗಳು<br>➢ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಲಿಖಿತ + 20 ಆಂತರಿಕ = 100 ಅಂಕಗಳು | ಒಟ್ಟು 625 ಅಂಕಗಳಿಗೆ | LBA ಪ್ರಶ್ನೆಕೋಠಿಯನ್ನು ಆಧರಿಸಿ ಪೂರ್ವ ಸಿದ್ಧತಾ ಪರೀಕ್ಷೆ ಮಾಡುವುದು. **(ಸೂಚನೆ: ಕೇವಲ ಅಭ್ಯಾಸಕ್ಕೆ ಮಾತ್ರ).** |

Scanned with OKEN Scanner

| | | |
|---|---|---|
| **ಎರಡನೇ ಸಂಕಲನಾತ್ಮಕ ಮೌಲ್ಯಾಂಕನ SA 2**<br>➢ 9ನೇ ತರಗತಿಯ SA-2 ಮೌಲ್ಯಾಂಕನಕ್ಕೆ ಆಯಾ ಭಾಷೆ ಹಾಗೂ 3 ಕೋರ್ ವಿಷಯಗಳಿಗೆ ನಿಗದಿಪಡಿಸಿದ ವಾರ್ಷಿಕ ಶೇ.100 ರಷ್ಟು ಪಠ್ಯವನ್ನು ಪರಿಗಣಿಸುವುದು. **(ದಿ: 16-06-2026 ರಿಂದ 14-03-2027 ರವರೆಗೆ ಮತ್ತು ಪುನರಾವರ್ತನೆ)**<br>➢ **ಆಂತರಿಕ ಮೌಲ್ಯಾಂಕನ:** ನಾಲ್ಕು ರೂಪಣಾತ್ಮಕ ಮೌಲ್ಯಾಂಕನಗಳ (FA-1+FA-2+FA-3+FA-4) = 50+50+50+50 = ಒಟ್ಟು 200 ಅಂಕಗಳಿಗೆ ನಿರ್ವಹಿಸಿ ನಂತರ ಪ್ರಥಮ ಭಾಷೆ 25 ಅಂಕಗಳಿಗೆ ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ 3 ಕೋರ್ ವಿಷಯಗಳಿಗೆ ತಲಾ 20 ಅಂಕಗಳಿಗೆ ಪರಿವರ್ತಿಸಿ ಅಂದರೆ 25+20+20+20+20+20 = ಒಟ್ಟು 125 ಅಂಕಗಳನ್ನು ಆಂತರಿಕ ಮೌಲ್ಯಾಂಕನಕ್ಕೆ ಪರಿಗಣಿಸುವುದು.<br>➢ **SA-2 ಮೌಲ್ಯಾಂಕನ:** ಪ್ರಥಮ ಭಾಷೆಗೆ 100 ಅಂಕಗಳು, ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ ತಲಾ 80 ಅಂಕಗಳಿಗೆ ಅಂದರೆ 100+80+80+80+80+80 = ಒಟ್ಟು 500 ಅಂಕಗಳಿಗೆ ಮೌಲ್ಯಾಂಕನ / ಲಿಖಿತ ಪರೀಕ್ಷೆಯನ್ನು ನಡೆಸುವುದು.<br>ಅಂತಿಮವಾಗಿ ಫಲಿತಾಂಶ ನಿರ್ಧರಿಸಲು ಆಂತರಿಕ ಮೌಲ್ಯಾಂಕನದ ಅಂಕಗಳು ಮತ್ತು SA-2 ಮೌಲ್ಯಾಂಕನದ ಲಿಖಿತ ಪರೀಕ್ಷೆಯ ಅಂಕಗಳನ್ನು (125+500=625) ಪರಿಗಣಿಸುವುದು. | 625 | • ದಿ: 15-03-2027 ರಿಂದ 20-03-2027 ರವರೆಗೆ LBA ಪ್ರಶ್ನೆಕೋಠಿಯನ್ನು ಆಧರಿಸಿ **SA 2** ಮೌಲ್ಯಾಂಕನ ಮಾಡುವುದು.<br>• ಏಪ್ರಿಲ್ ತಿಂಗಳಿನಲ್ಲಿ ನಡೆಯುವ ಪ್ರೌಢಶಾಲೆಯ ಸಮುದಾಯದತ್ತ ಶಾಲೆ ಕಾರ್ಯಕ್ರಮದಲ್ಲಿ 8 ಮತ್ತು 9ನೇ ತರಗತಿಯ ಫಲಿತಾಂಶ ಪ್ರಕಟಿಸುವುದು ಹಾಗೂ ವಿದ್ಯಾರ್ಥಿಗಳ **ಕೃತಿಸಂಪುಟ / ಉತ್ತರ ಪತ್ರಿಕೆಗಳ** ಮುಖೇನ ವಿದ್ಯಾರ್ಥಿಗಳ ಕಲಿಕಾ ಪ್ರಗತಿಯನ್ನು ಪೋಷಕರೊಂದಿಗೆ ಹಂಚಿಕೊಳ್ಳುವುದು. |
| **10ನೇ ತರಗತಿಗೆ ಪೂರ್ವಸಿದ್ಧತಾ ಪರೀಕ್ಷೆ**<br>➢ 10ನೇ ತರಗತಿ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಯ ಪೂರ್ವ ತಯಾರಿಗಾಗಿ ವಾರ್ಷಿಕ ಪಠ್ಯಕ್ಕೆ ಅನುಗುಣವಾಗಿ KSEAB ನಿರ್ದೇಶನದಂತೆ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ನಿರ್ವಹಿಸುವುದು.<br>➢ ಪ್ರಥಮ ಭಾಷೆ 100 ಲಿಖಿತ + 25 ಆಂತರಿಕ =125 ಅಂಕಗಳು.<br>ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಲಿಖಿತ + 20 ಆಂತರಿಕ = 100 ಅಂಕಗಳು. | ಒಟ್ಟು 625 ಅಂಕಗಳಿಗೆ | • KSEAB ವತಿಯಿಂದ ಪ್ರಕಟಿಸುವ ವೇಳಾಪಟ್ಟಿಯಂತೆ 10ನೇ ತರಗತಿ ಪೂರ್ವ ಸಿದ್ಧತಾ ಪರೀಕ್ಷೆಗಳನ್ನು ನಡೆಸುವುದು. |

Scanned with OKEN Scanner

| | | |
|---|---|---|
| **10ನೇ ತರಗತಿ ವಾರ್ಷಿಕ ಪರೀಕ್ಷೆ**<br><br>➢ ಪ್ರಥಮ ಭಾಷೆಗೆ 100 ಅಂಕಗಳು, ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಅಂಕಗಳಿಗೆ ಲಿಖಿತ ಪರೀಕ್ಷೆಯನ್ನು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯಿಂದ (KSEAB) ನಡೆಸಲಾಗುವುದು.<br><br>➢ ನಾಲ್ಕು ರೂಪಣಾತ್ಮಕ ಮೌಲ್ಯಾಂಕನಗಳ (FA1+FA2+FA3+FA4) = ಒಟ್ಟು 200 ಅಂಕಗಳನ್ನು ಪ್ರಥಮ ಭಾಷೆಗೆ 25 ಅಂಕಗಳಿಗೆ ಹಾಗೂ ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 20 ಅಂಕಗಳಿಗೆ ಪರಿವರ್ತಿಸಿ ಆಂತರಿಕ ಮೌಲ್ಯಾಂಕನಕ್ಕೆ ಪರಿಗಣಿಸಲಾಗುವುದು.<br><br>➢ ಪ್ರಥಮ ಭಾಷೆ 100 ಲಿಖಿತ + 25 ಆಂತರಿಕ = 125 ಅಂಕಗಳು, ದ್ವಿತೀಯ ಮತ್ತು ತೃತೀಯ ಭಾಷೆ ಹಾಗೂ ಕೋರ್ ವಿಷಯಗಳಿಗೆ 80 ಲಿಖಿತ + 20 ಆಂತರಿಕ = 100 ಅಂಕಗಳಿಗೆ ಮೌಲ್ಯಾಂಕನ ನಡೆಸಲಾಗುವುದು.<br><br>➢ ಆಂತರಿಕ ಮೌಲ್ಯಾಂಕನದ ಅಂಕಗಳು ಮತ್ತು KSEAB ಯಿಂದ ನಡೆಸಲಾಗುವ ವಾರ್ಷಿಕ ಪರೀಕ್ಷೆಯ ಅಂಕಗಳನ್ನು (125+500=625) ಪರಿಗಣಿಸಿ ಮಂಡಳಿಯಿಂದ ಫಲಿತಾಂಶವನ್ನು ಪ್ರಕಟಿಸಲಾಗುವುದು. | 625 ಅಂಕಗಳಿಗೆ | KSEAB ವತಿಯಿಂದ ಪ್ರಕಟಿಸುವ ವೇಳಾಪಟ್ಟಿಯಂತೆ 10ನೇ ತರಗತಿ ಅಂತಿಮ ವಾರ್ಷಿಕ ಪರೀಕ್ಷೆ ನಡೆಸುವುದು. |

Scanned with OKEN Scanner

| 2026-27 ನೇ ಶೈಕ್ಷಣಿಕ ಸಾಲಿನ 1-10ನೇ ತರಗತಿಗಳಿಗೆ ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಾಂಕನ/ವಾರ್ಷಿಕ ಪರೀಕ್ಷೆಗೆ ನಿಗದಿಪಡಿಸಿದ ಶೇಕಡಾವಾರು ಪಠ್ಯಹಂಚಿಕೆ ವಿವರ | | | | | | | | |
|---|---|---|---|---|---|---|---|---|
| ಕ್ರ. ಸಂ | ತರಗತಿ | ಭಾಗ-1 | | | ಭಾಗ-2 | | | ಅಂತಿಮ ಒಟ್ಟು |
| | | ರೂ. ಮೌ-1 FA-1 % | ರೂ.ಮೌ-2 FA-2 % | ಸಂ.ಮೌ-1 SA 1 % | ರೂ.ಮೌ -3 FA 3 % | ರೂ.ಮೌ-4 FA-4 % | ಸಂ.ಮೌ-2 /ವಾರ್ಷಿಕ ಪರೀಕ್ಷೆ SA 2/ Annual Exam | |
| 1 | 1 ರಿಂದ 3ನೇ ತರಗತಿಗಳು **(ಕಲಿ-ನಲಿ/ ನಲಿ-ಕಲಿ/ ದ್ವಿಭಾಷಾ)** | 20 | 15 | 50 (ಉಳಿದ ಶೇ.15 ಪಠ್ಯ) | 20 | 20 | 50 (ಉಳಿದ ಶೇ.10 ಪಠ್ಯ) | 100 |
| 2 | 4 & 5ನೇ ತರಗತಿ | 25 | 15 | 50 (ಉಳಿದ ಶೇ.10 ಪಠ್ಯ) | 20 | 20 | 50 (ಉಳಿದ ಶೇ.10 ಪಠ್ಯ) | 100 |
| 3 | 4 & 5ನೇ ದ್ವಿಭಾಷಾ ತರಗತಿಗಳು | 20 | 20 | 50 (ಉಳಿದ ಶೇ.10 ಪಠ್ಯ) | 20 | 20 | 50 (ಉಳಿದ ಶೇ.10 ಪಠ್ಯ) | 100 |
| 4 | 6 ಮತ್ತು 7ನೇ ತರಗತಿ | 25 | 15 | 50 (ಉಳಿದ ಶೇ.10 ಪಠ್ಯ) | 20 | 20 | 50 (ಉಳಿದ ಶೇ.10 ಪಠ್ಯ + ವಾರ್ಷಿಕ ಪಠ್ಯ ) | 100 |
| 5 | 8ನೇ ತರಗತಿ | 25 | 15 | 50 (ಉಳಿದ ಶೇ.10 ಪಠ್ಯ) | 20 | 20 | 100 (ಉಳಿದ ಶೇ.10 ಪಠ್ಯ + ವಾರ್ಷಿಕ ಪಠ್ಯ ) | 100 |
| 5 | 9ನೇ ತರಗತಿ | 25 | 15 | 50 (ಉಳಿದ ಶೇ.10 ಪಠ್ಯ) | 25 | 25 | 100 | 100 |
| 6 | 10ನೇ ತರಗತಿ | 25 | 15 | 50 (ಉಳಿದ ಶೇ.10 ಪಠ್ಯ) | 25 | 25 | 100 | 100 |

## ಮಾಹೆವಾರು ಮತ್ತು ಶೇಕಡಾವಾರು ವಾರ್ಷಿಕ ಪಾಠ ಹಂಚಿಕೆ ಘೋಷ್ವಾರೆ

| ತರಗತಿಗಳು | % ಜೂನ್-26 | % ಜುಲೈ-26 | % ಆಗಸ್ಟ್-26 | % ಸೆಪ್ಟೆಂಬರ್ -26 | ಒಟ್ಟು | % ಅಕ್ಟೋಬರ್-26 | % ನವೆಂಬರ್-26 | % ಡಿಸೆಂಬರ್ -26 | % ಜನವರಿ-27 | % ಫೆಬ್ರವರಿ-27 | % ಮಾರ್ಚ್-27 | ಒಟ್ಟು | ಅಂತಿಮ ಒಟ್ಟು |
|---|---|---|---|---|---|---|---|---|---|---|---|---|---|
| 1 ನೇ ತರಗತಿ | 5 | 15 | 15 | 15 | **50** | 0 | 10 | 15 | 15 | 10 | - | **50** | **100** |
| 2 ಮತ್ತು 3ನೇ ಕಲಿ-ನಲಿ,ನಲಿ-ಕಲಿ ತರಗತಿಗಳು | 5 | 15 | 15 | 15 | **50** | 0 | 10 | 15 | 15 | 10 | - | **50** | **100** |
| 2 ಮತ್ತು 3ನೇ ದ್ವಿಭಾಷಾ ತರಗತಿಗಳು | 5 | 15 | 15 | 15 | **50** | 0 | 10 | 15 | 15 | 10 | - | **50** | **100** |
| 4 ಮತ್ತು 5 ನೇ ತರಗತಿಗಳು | 10 | 15 | 15 | 10 | **50** | 5 | 10 | 15 | 10 | 10 | - | **50** | **100** |
| 4 ಮತ್ತು 5 ನೇ ದ್ವಿಭಾಷಾ ತರಗತಿಗಳು | 5 | 15 | 20 | 10 | **50** | 5 | 10 | 15 | 10 | 10 | - | **50** | **100** |
| 6 ರಿಂದ 8ನೇ ತರಗತಿ | 10 | 15 | 15 | 10 | **50** | 5 | 10 | 15 | 10 | 10 | - | **50** | **100** |
| 9 ತರಗತಿ | 10 | 15 | 15 | 10 | **50** | 5 | 20 | 20 | 5 | - | - | **50** | **100** |
| 10ನೇ ತರಗತಿ | 10 | 15 | 15 | 10 | **50** | 5 | 20 | 20 | 5 | - | - | **50** | **100** |

Scanned with OKEN Scanner

**ಸೂಚನೆಗಳು:**

1. **DSERT website** ನಲ್ಲಿ **https://dsert.karnataka.gov.in** ಅಳವಡಿಸಲಾಗಿರುವ ತರಗತಿವಾರು/ವಿಷಯವಾರು ಸೇತುಬಂಧ ಸಾಹಿತ್ಯ, ಪರಿಷ್ಕೃತ SAP, FLN ಮತ್ತು ಅಪೇಕ್ಷಿತ ಕಲಿಕಾ ಫಲಗಳನ್ನೊಳಗೊಂಡ ಅನುಬಂಧ ಮತ್ತು ಭೇಟಿ ನಮೂನೆಯನ್ನು ಬಳಸಿ ಸೇತುಬಂಧ ಉಪಕ್ರಮವನ್ನು ಅನುಷ್ಠಾನ ಮಾಡುವುದು.
2. ಮೌಲ್ಯಾಂಕನ ಕಾರ್ಯವನ್ನು ನಿರ್ವಹಿಸಿ, ಸಾಂದರ್ಭಿಕವಾಗಿ ಸೃಜನೆಯಾಗುವ ವಿದ್ಯಾರ್ಥಿಗಳ ಉತ್ತಮ ಪ್ರಗತಿಯ ದಾಖಲೆಗಳನ್ನು ವಿದ್ಯಾರ್ಥಿಗಳ ಕೃತಿ ಸಂಪುಟದಲ್ಲಿ ಸಂಗ್ರಹಿಸಿಡುವುದು ಹಾಗೂ ಪೋಷಕರೊಂದಿಗೆ ಹಂಚಿಕೊಳ್ಳುವುದು.
3. ನಿಗದಿಪಡಿಸಿದ ಸಮಯದಲ್ಲಿ ಮೌಲ್ಯಾಂಕನ ಚಟುವಟಿಕೆಗಳನ್ನು ಕೈಗೊಳ್ಳುವುದು. ಮೌಲ್ಯಾಂಕನಕ್ಕೆ ವಿದ್ಯಾರ್ಥಿ ಗೈರು ಹಾಜರಾದಲ್ಲಿ ಸಾಂದರ್ಭಿಕವಾಗಿ ಕ್ರಮವಹಿಸಿ, ವಿದ್ಯಾರ್ಥಿಗಳ ಕೃತಿ ಸಂಪುಟದಲ್ಲಿ ದಾಖಲಿಸಿರುವ ಚಟುವಟಿಕೆಗಳೊಂದಿಗೆ ಸಂಯೋಜನೆ ಮಾಡಿಕೊಂಡು ಆ ವಿದ್ಯಾರ್ಥಿಯನ್ನು ಮೌಲ್ಯಾಂಕನಕ್ಕೆ ಒಳಪಡಿಸುವುದು.
4. ಪಾಠ ಆಧಾರಿತ ಮೌಲ್ಯಾಂಕನ (LBA) ಪೂರ್ಣಗೊಂಡ 2 ದಿನಗಳಲ್ಲಿ, ರೂಪಣಾತ್ಮಕ ಮತ್ತು ಸಂಕಲನಾತ್ಮಕ ಮೌಲ್ಯಾಂಕನಗಳು ಪೂರ್ಣಗೊಂಡ 7 ದಿನಗಳೊಳಗೆ ವಿದ್ಯಾರ್ಥಿಗಳ ಪ್ರಗತಿಯನ್ನು SATS ತಂತ್ರಾಂಶದಲ್ಲಿ ಕಡ್ಡಾಯವಾಗಿ ಇಂದೀಕರಿಸುವುದು.
5. ಕ್ಲಸ್ಟರ್ ಹಂತದ CRP ಹಾಗೂ ಬ್ಲಾಕ್ ಹಂತದ ಅಧಿಕಾರಿಗಳು SATS ತಂತ್ರಾಂಶದಲ್ಲಿ ಪ್ರತಿ ಶಾಲೆಯು ಮೌಲ್ಯಾಂಕನ ದಾಖಲಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳುವುದು ಹಾಗೂ ಅವಶ್ಯ ಮಾರ್ಗದರ್ಶನ ನೀಡುವುದು.
6. SATS ತಂತ್ರಾಂಶದಲ್ಲಿ ಲಭ್ಯವಿರುವ ವಿಶ್ಲೇಷಣಾ ವರದಿಯನ್ನು ಆಧರಿಸಿ ವಿದ್ಯಾರ್ಥಿಗಳು ನಿರ್ದಿಷ್ಟ ಕಲಿಕೆಯನ್ನು ಸಾಧಿಸಲು ಜಿಲ್ಲೆಯ ಉಪನಿರ್ದೇಶಕರು, ಆಡಳಿತ ಹಾಗೂ ಅಭಿವೃದ್ಧಿ ರವರ ವ್ಯಾಪ್ತಿಗೆ ಒಳಪಡುವ ಎಲ್ಲಾ ಮೇಲ್ವಿಚಾರಣಾ ಅಧಿಕಾರಿಗಳು, ಜಿಲ್ಲೆ, ಬ್ಲಾಕ್ ಮತ್ತು ಕ್ಲಸ್ಟರ್ ಹಂತದ ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಅಗತ್ಯ ಮಾರ್ಗದರ್ಶನ ನೀಡುವುದು.
7. 1 ರಿಂದ 3ನೇ ತರಗತಿಗಳ ನಲಿ-ಕಲಿ ಘಟಕಗಳಲ್ಲಿ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಸಮಗ್ರ ಶಿಕ್ಷಣ ಕರ್ನಾಟಕದ ನಲಿ-ಕಲಿ ಕೋಶದ ವತಿಯಿಂದ ನೀಡಿರುವ ಸುತ್ತೋಲೆಯಂತೆ ಕ್ರಮವಹಿಸುವುದು.
8. ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಆಗಿಂದ್ದಾಗೆ ಇಲಾಖೆಯಿಂದ ಹೊರಡಿಸುವ ಜ್ಞಾಪನ / ಸುತ್ತೋಲೆಗಳನ್ನು ಅನುಸರಿಸುವುದು.

ಮೇಲಿನ ಎಲ್ಲಾ ಅಂಶಗಳನ್ನು ಗಮನಿಸಿ 2026-27ನೇ ಸಾಲಿನ ಶೈಕ್ಷಣಿಕ ವರ್ಷದ ಮೌಲ್ಯಾಂಕನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಲು ಸೂಚಿಸಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ

ಆಯುಕ್ತರು
ಶಾಲಾ ಶಿಕ್ಷಣ ಇಲಾಖೆ

**ಗೆ,**

1. ರಾಜ್ಯದ ಎಲ್ಲಾ ಉಪನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿ ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು ಆಡಳಿತ ಮತ್ತು ಅಭಿವೃದ್ಧಿ ರವರ ಮೂಲಕ ಅಗತ್ಯ ಕ್ರಮಕ್ಕಾಗಿ.

Scanned with OKEN Scanner

3. ರಾಜ್ಯದ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಅಗತ್ಯ ಕ್ರಮಕ್ಕಾಗಿ.
4. SADPI, SATS ವಿಭಾಗ, ಆಯುಕ್ತರ ಕಛೇರಿ ರವರು ಸದರಿ ಸುತ್ತೋಲೆಯಂತೆ SATS ತಂತ್ರಾಂಶದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ದಾಖಲಿಸಲು ಅನುವಾಗುವಂತೆ ತಂತ್ರಾಂಶ ಅಭಿವೃದ್ಧಿಪಡಿಸಿ ಅನುಪಾಲನೆ ಮಾಡುವುದು.

**ಪ್ರತಿಯನ್ನು ಗೌರವ ಪೂರ್ವಕವಾಗಿ:**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಗಳು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ರವರಿಗೆ ಅವಗಾಹನೆಗೆ ಸಲ್ಲಿಸಿದೆ.
3. ಅಪರ ಆಯುಕ್ತರು, ಧಾರವಾಡ ಆಯುಕ್ತಾಲಯ ಮತ್ತು ಕಲಬುರಗಿ ಆಯುಕ್ತಾಲಯ, ಶಾಲಾ ಶಿಕ್ಷಣ ಇಲಾಖೆ, ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ರಾಜ್ಯದ ಎಲ್ಲಾ ನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ ರವರಿಗೆ ಅನುಪಾಲನೆಗಾಗಿ.
5. ಕಛೇರಿ ಪ್ರತಿ.

Scanned with OKEN Scanner